**ಅಸಲು ದಾವೆ ಸಂಖ್ಯೆ: 135/2014**

**ಪಿಡಬ್ಲೂ - 1**

**ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

ದಿಃ 29-01-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ MNK ಪರ ವಕೀಲರಿಂದ.**

**(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಹಿಂದಿಭಾಷೆ ಬರುತ್ತಿದ್ದು ವಾದಿ ಮತ್ತು ಪ್ರತಿವಾದಿ ಪರ ವಕೀಲರಿಗೆ ಮತ್ತು ನ್ಯಾಯಾಲಯಕ್ಕೆ ಹಿಂದಿ ಭಾಷೆ ಬರುತ್ತಿದ್ದು ನ್ಯಾಯಾಲಯವು ಸ್ವತಹ ಕನ್ನಡ ಭಾಷೆಗೆ ತರ್ಜುಮೆ ಮಾಡಲಾಯಿತು.)**

ನಾನು 1989 ರಲ್ಲಿ ಹುಬ್ಬಳಿಯ ಸೆಂಟ್ ಮೈಕಲ್ಸ ಶಾಲೆಯಲ್ಲಿ 10 ನೇ ತರಗತಿಯನ್ನು ಪಾಸ್ ಮಾಡಿರುತ್ತೇನೆ. ನಾನು ನಂತರ ಸೌದಿ-ಅರೇಬಿಯಾ ಹೋಗಿರುವುದಿಲ್ಲ. ನಾನು 10 ನೇ ತರಗತಿ ನಂತರ ಒಂದು ವರ್ಷ ಕಾಲೇಜಿಗೆ ಹೋಗಿ ಮುಂದಿನ ಶಿಕ್ಷಣ ಬಿಟ್ಟಿರುತ್ತೇನೆ. ನಂತರ ನಾನು 1993-1994 ರಿಂದ ಸ್ಕ್ರಾಪ ಬಿಜಿನೆಸ್‌ನ್ನು ಮನೆಯಲ್ಲೇ ಮಾಡಲು ಪ್ರಾರಂಭಿಸಿದೇನು.

ನಾನು ರಿಯಲ್ ಇಸ್ಟೇಟ್ ವ್ಯವಹಾರ ಮಾಡುವುದಿಲ್ಲ. ನಾನು ರಿಯಲ್ ಇಸ್ಟೇಟ್ ವ್ಯವಹಾರ ಮಾಡಿದ್ದರೂ, ಮಾಡುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ವಿಜಾಪೂರದಲ್ಲಿ ವಾಸಿಸುತ್ತಾರೆ ಎಂದರೆ ಸರಿ. ವಾದಿಯ ಗಂಡ D.Y.S.P ಆಗಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. ವಾದಿಯು ಕಳೆದ 20 ವರ್ಷಗಳಿಂದ ವಿಜಾಪೂರದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ವಾದಿ ಮತ್ತು ನಮ್ಮ ಪರಿಚಯ ಮೊದಲಿನಿಂದಲೂ ಇರುತ್ತದೆ. ನಾವುಗಳು ಕುಟುಂಬದ ಸ್ನೇಹಿತರಾಗಿರುತ್ತೇವೆ. ವಾದಿಯು

**ಅಸಲು ದಾವೆ ಸಂಖ್ಯೆ: 135/2014**

**ಪಿಡಬ್ಲ್ಯೂ -1**

ಬೆಳಗಾವಿಯ ಅಜಮ್ ನಗರದಲ್ಲಿ ನಮ್ಮ ಅಕ್ಕಪಕ್ಕದವರಾಗಿದ್ದರು. ನಾನು ಯಾವ ವರ್ಷದಲ್ಲಿ ಅಜಮ್ ನಗರದಲ್ಲಿ ವಾಸವಿದ್ದೆ ಎಂದು ಹೇಳಲು ಆಗುವುದಿಲ್ಲ. ಕಲೈಗಾರ ಗಲ್ಲಿಯಲ್ಲಿರುವ 1033 ಮನೆ ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ವಾದಿಯು ಅಜಮ್ ನಗರದ 1 ನೇ ಕ್ರಾಸ್ ನ 5 ನೇ ಲೈನ್ ನಲ್ಲಿ ವಾಸವಿದ್ದರು. ಮನೆ ನಂಬರ ನನಗೆ ಹೇಳಲು ಆಗುವುದಿಲ್ಲ. ವಾದಿಯು 1990 ರಿಂದ 1997 ರ ವರೆಗೆ ಅಜಮ್ ನಗರದಲ್ಲಿ ಬಿ ಎಮ್ ರಿಸಾಲದಾರ ಇವರ ಮನೆಯಲ್ಲಿ ವಾಸವಿದ್ದರು. ಬಿ ಎಮ್ ರಿಸಾಲದಾರ KAS Officer ಆಗಿದ್ದರು ಎಂದರೆ, ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ಈಗ ಶೇರಖಾನವಾಲೆ ಮಜಿದ್ ನ ಆಡಳಿತ ಅಧಿಕಾರಿಯಾಗಿರುತ್ತಾರೆ ಎಂದರೆ, ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ಸಹ ಮೂಲತಃ ವಿಜಾಪೂರದವರು ಎಂದರೆ, ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು ನಾನು ಮೇಲೆ ಹೇಳಿದ ವರ್ಷಗಳಲ್ಲಿ ಬಿ ಎಮ್ ರಿಸಾಲದಾರ ಮನೆಯಲ್ಲಿ ವಾಸವಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ನಾನು ಮೇಲೆ ಹೇಳಿದ ವರ್ಷಗಳಲ್ಲಿ ಬಿ ಎಮ್ ರಿಸಾಲದಾರ ಮನೆಯಲ್ಲಿ ವಾದಿ ವಾಸವಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ನನಗೆ 18-1-2014 ರಲ್ಲಿ ಅಧಿಕಾರ ಪತ್ರ ನೀಡಿರುತ್ತಾರೆ. ವಾದಿಯು ನಮ್ಮ ಕುಟುಂಬದ ಸಂಬಂಧಿರಲ್ಲ ಎಂದರೆ ಸರಿ. ನಿಪಿ-1 ನ್ನು ರಮೇಶ ಜೋಶಿ ಎಂಬ ವಕೀಲರು ತಯಾರಿಸಿರುತ್ತಾರೆ. ಸದರಿ ವಕೀಲರು ಶನಿವಾರ ಖೂಟದಲ್ಲ ಇರುತ್ತಾರೆ. ವಾದಿಗೆ ಇಬ್ಬರು ಮಕ್ಕಳು, ಆದರೆ ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ವಾದಿಯ ಒಬ್ಬ ಮಗ ಬೆಂಗಳೂರಿನಲ್ಲಿ ಮತ್ತು ಒಬ್ಬ ಮಗ ವಿಜಾಪೂರದಲ್ಲಿ ವಾಸಿಸುತ್ತಾರೆ. ವಾದಿಯ ಗಂಡ ನಿವೃತ್ತಿ

ಜೀವನವನ್ನು ವಿಜಾಪೂರದಲ್ಲೇ ನಡೆಸುತ್ತಿದ್ದಾರೆ ಎಂದರೆ ಸರಿ. ನಿಪಿ-1 ನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ನಿಪಿ-1 ಕ್ಕೆ ಯಾವ ಆಧಾರದ ಮೇಲೆ ಮಾಹಿತಿ ನೀಡಿರುತ್ತೀರಿ ಎಂದು ಪ್ರಶ್ನಿಸಿದರೆ, ಸಾಕ್ಷಿಯು ಖರೀದಿ ಪತ್ರ ನೋಡಿ ಮಾಹಿತಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಗಾಗಲಿ ಅವರ ಗಂಡನಿಗಾಗಲಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಲು ತೊಂದರೆ ಇಲ್ಲಾ ಎಂದರೆ, ಸಾಕ್ಷಿಯು ಅವರ ಆರೋಗ್ಯ ಸರಿಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿಯವರ ಆರೋಗ್ಯ ಸರಿಯಿಲ್ಲಾ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲಾ ಎಂದರೆ ಸರಿ. ನಿಪಿ-1 ರಲ್ಲಿ ಸದರಿಯವರ ಆರೋಗ್ಯದ ಬಗ್ಗೆ ಬರೆದಿರುವುದಿಲ್ಲಾ ಎಂದರೆ ಸರಿ. ನಿಪಿ-1 ರಲ್ಲಿ ವಾದಿ ಮತ್ತು ನಮ್ಮ ಪರಿಚಯ ಮೊದಲಿನಿಂದಲೂ ಇದೆ ಎಂದು ಬರೆದಿಲ್ಲಾ ಎಂದರೆ ಸರಿ. ವಾದಿ ಮತ್ತು ನಮ್ಮ ಪರಿಚಯ ಈ ದಾವೆ ಹೂಡುವ ಸಂದರ್ಭದಲ್ಲಿ ಆಗಿರುತ್ತದೆ ಮತ್ತು ಅದಕ್ಕೂ ಮೊದಲು ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ಅಸದ್ ಖಾನ್ ಸೊಸೈಟಿಯ ಪ್ಲಾಟಗಳ ಕೇಸುಗಳು ಚಾಲ್ತಿಯಲ್ಲಿ ಬಹಳಷ್ಟು ಇರುತ್ತವೆ ಎಂದರೆ, ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಮಿತ್ರರು ಸೇರಿ ತಂಟೆ ಇರುವ ಸ್ವತ್ತುಗಳಿಗೆ ಅಧಿಕಾರ ಪತ್ರ ಪಡೆದು ಹಣ ವಸೂಲಿ ಮಾಡುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಹ ಅದೇ ಪ್ರಕಾರ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಪ್ಲಾಟ ನಂಬರ 33, ಸರ್ವೆ ನಂಬರ 54/2 ಗೆ ಹೂಡಲಾಗಿರುತ್ತದೆ. ಸದರಿ ಸ್ವತ್ತು ಬಿ.ಕೆ ಕಂಗ್ರಾಳಿಯ, ಅಜಮ್ ನಗರದಲ್ಲಿರುತ್ತದೆ. ಸದರಿ ಸ್ವತ್ತು ಮೊದಲು ಅಸದ್ ಖಾನ್ ಸೊಸೈಟಿಗೆ ಸೇರಿತ್ತು. ಸರ್ವೆ ನಂಬರ 54 ಒಟ್ಟು ವಿಸ್ತೀರ್ಣ ನನಗೆ ತಿಳಿದಿಲ್ಲ. ಸದರಿ ಸರ್ವೆ

ನಂಬರನಲ್ಲಿ ಅಸದ್ ಖಾನ್ ಸೊಸೈಟಿ ಒಟ್ಟು ಎಷ್ಟು ಪ್ಲಾಟಗಳನ್ನು ಮಾಡಿರುತ್ತದೆ ಎಂದು ನನಗೆ ತಿಳಿದಿಲ್ಲ. ಪ್ಲಾಟ ನಂಬರ 33 ನ್ನು ವಾದಿಯ ದಿನಾಂಕ 18-4-1990 ರಲ್ಲಿ ಖರೀದಿಸಿರುತ್ತಾರೆ. ಸೊಸೈಟಿಯು ಪ್ಲಾಟ ನೀಡಬೇಕಾದರೆ ಸೊಸೈಟಿಯ ಸದಸ್ಯರಾಗಿರುವುದು ಕಡ್ಡಾಯವಾಗಿರುತ್ತದೆ ಎಂದರೆ ಸರಿಯಲ್ಲ. ಸದಸ್ಯತ್ವ ಪಡೆದನಂತರ allotment ಅದ ನಂತರ ಖರೀದಿ ಪತ್ರ ಮಾಡಿಕೊಡುತ್ತಾರೆ ಎಂದರೆ, ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು ಅಸದ್ ಖಾನ್ ಸೊಸೈಟಿಯ ಸದಸ್ಯರಾಗಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ಕಾಗದಗಳಿಲ್ಲ ಎಂದರೆ ಸರಿ. ವಾದಿಯ ಹೆಸರಿಗೆ ಯಾವ resolution ಆಧಾರದ ಮೇಲೆ ಪ್ಲಾಟ್ ನಂಬರ 33 ಹಂಚಿಕೆಯಾಗಿರುತ್ತದೆ ಎಂದು ತೋರಿಸಲು ನನ್ನ ಬಳಿ ಯಾವುದೇ ಕಾಗದಗಳಿಲ್ಲ ಎಂದರೆ ಸರಿ. ನಾನು ಅಸದ್ ಖಾನ್ ಸೊಸೈಟಿಯ ಬೈ-ಲಾ ನೋಡಿರುವುದಿಲ್ಲ. ಅಸದ್ ಖಾನ್ ಸೊಸೈಟಿಯ ಬೈ-ಲಾ ದಂತೆ ಸೇಕ್ರೆಟರಿ ಖರೀದಿ ಪತ್ರ ಮಾಡಿಕೊಡುವ ಅಧಿಕಾರ ಹೊಂದಿರುತ್ತಾರೆ ಎಂದರೆ, ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ನ್ನು ಅಸದ್ ಖಾನ್ ಸೊಸೈಟಿಯ ಚೇರಮನ್ ಮಾಡಿಕೊಟ್ಟಿರುತ್ತಾರೆ. ಸೊಸೈಟಿಯು ಯಾವುದೇ ಪತ್ರ ಮಾಡಿಕೊಟ್ಟರೆ ಅದರಲ್ಲಿ ಸೊಸೈಟಿಯ ಮೋಹರು ಇರುತ್ತದೆ ಎಂದರೆ , ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1990 ರಿಂದಲೂ ಅಸದ್ ಖಾನ್ ಸೊಸೈಟಿ ತನ್ನ ಸದಸ್ಯರಿಗೆ ಪ್ಲಾಟಗಳನ್ನು ಹಂಚಿಕೆ ಮಾಡಿಲ್ಲ ಎಂದು ಬೆಳಗಾವಿ ನ್ಯಾಯಾಲಯ ಮತ್ತು ಮಾನ್ಯ ಉಚ್ಚ ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ ಇರುತ್ತವೆ ಎಂದರೆ, ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ಲಾಟ ನಂಬರ 33 ಮೂಲ ಖರೀದಿ ಪತ್ರ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ, ಸಾಕ್ಷಿಯು ಅದು ಕಳೆದು ಹೋಗಿರುತ್ತದೆ ಎಂದು

ನುಡಿಯುತ್ತಾರೆ. ಮೂಲ ಖರೀದಿ ಪತ್ರ ಸ್ಥಳದಲ್ಲೇ ಕಳೇದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ದಾವೆಯನ್ನು ಹೂಡುವಾಗ Xerox ಪ್ರತಿಯನ್ನು ಹಾಜರುಪಡಿಸಲಾಗಿತ್ತೇ ಎಂದರೆ, ಸಾಕ್ಷಿಯು Certified copy ಹಾಜರುಪಡಿಸಲಾಗಿತ್ತು, ಅದು ನಿಪಿ-10 ಎಂದು ನುಡಿಯುತ್ತಾರೆ. ನಿಪಿ-10 ರ ದೃಢೀಕೃತ ಪ್ರತಿಯನ್ನು ದಿನಾಂಕಃ 20-7-2009 ರಲ್ಲಿ ಪಡೆಯಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ವಾದಿ ಪಡೆದಿರುತ್ತಾರೆ ಎಂದರೆ ಸರಿ. ನಿಪಿ-10 ನ್ನು ವಾದಿಯು ಯಾವ ಸಂದರ್ಭದಲ್ಲಿ ಪಡೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಿಪಿ-10 ರ ಮೂಲ ದಾಖಲಾತಿಯನ್ನು ಅಸದ್ ಖಾನ್ ಸೊಸೈಟಿ ಎಂದಿಗೂ ಬರೆದು ಕೊಟ್ಟಿಲ್ಲ ಎಂದರೆ, ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ರಲ್ಲಿ ಅಸದ್ ಖಾನ್ ಸೊಸೈಟಿ ಮೋಹರು ಇಲ್ಲಾ ಎಂದರೆ ಸರಿ. ನಿಪಿ-10 ರಲ್ಲಿ ಪ್ಲಾಟ್ ನಂಬರ 33 ರ ಉದ್ದ ಮತ್ತು ಅಳತೆ ಬರೆದಿಲ್ಲ ಎಂದರೆ ಸರಿ. ನಿಪಿ-10 ರಲ್ಲಿ 1990 ರಲ್ಲಿ ವಾದಿಯ ವಿಳಾಸವನ್ನು ಯಲಬುರ್ಗಿ ಬಿಲ್ಡಿಂಗ್, ಬೆಳಗಾವಿ ಎಂದು ನಮೂದಿಸಿದೆ ಎಂದರೆ ಸರಿ. ಅಸದ್ ಖಾನ್ ಸೊಸೈಟಿ ಖರೀದಿ ಪತ್ರ ಮಾಡಿಕೊಟ್ಟವರಿಗೆ Possession letter ನೀಡಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದು ವರೆದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ನ್ನು ನಾನು ಓದಿ ನೋಡಿರುವುದಿಲ್ಲ. ನಿಪಿ-10 ರಲ್ಲಿ ವಾದಿಗೆ ಸ್ವಾಧೀನ ನೀಡಿದ ಬಗ್ಗೆ ಬರೆದಿಲ್ಲ ಎಂದರೆ ಸರಿ. ನಿಪಿ-10 ರಂತೆ ವಾದಿಯು ಸ್ವಾಧೀನಕ್ಕೆ ಬಂದರು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲಾ ಎಂದರೆ ಸರಿ . 2014 ರಲ್ಲಿ ದಾವಾ ಸ್ವತ್ತಿನ ಮೌಲ್ಯ ಎಷ್ಟು ಇತ್ತು ಎಂದು ನನಗೆ ತಿಳಿದಿಲ್ಲ. 2014 ರಲ್ಲಿ ಗುಂಟೆಗೆ 15 ರಿಂದ 20 ಲಕ್ಷ ರೂ ಮೌಲ್ಯ ಇತ್ತು ಎಂದರೆ, ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಿಪಿ-10 ರಲ್ಲಿ ಪ್ಲಾಟ ನಂಬರ 33 ರ

ಚಕ್ಕುಬಂದಿ ಬರೆದಿರುತ್ತದೆ ಎಂದರೆ ಸರಿ. ನಿಪಿ-10 ರಲ್ಲಿರುವ ಚೆಕ್ಕುಬಂದಿ ಮತ್ತು ಪ್ರತಿವಾದಿಗಳ ಆಸ್ತಿಯ ಚೆಕ್ಕುಬಂದಿ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯವರು ನ್ಯಾಯಾಲಯಕ್ಕೆ ಹಾಜರಾದ ನಂತರ ಅವರ ಕೈಫಿಯತ್ ನಲ್ಲಿ ಪ್ಲಾಟ ನಂಬರ 33 ರ ಚೆಕ್ಕುಬಂದಿ ಮತ್ತು ಅವರ ಪ್ಲಾಟ್ ನ ಚಕ್ಕುಬಂದಿ ಬೇರೆ ಬೇರೆ ಇರುತ್ತದೆ ಎಂದು ಬರೆದಿರುತ್ತಾರೆ ಎಂದರೆ,ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು ನಿಪಿ-8 ರಂತೆ ಚಕ್ಕುಬಂದಿಯ ದುರಸ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಿಪಿ-8 ಈ ದಾವೆ ಚಾಲ್ತಿಯಲ್ಲಿದ್ದಾಗ ಮಾಡಲಾಯಿತು ಎಂದರೆ ಸರಿ. ಅಸದ್ ಖಾನ್ ಸೊಸೈಟಿಗೆ ನಿಪಿ-8 ನ್ನು ಬರೆದುಕೊಡುವ ಮೊದಲು ಯಾವುದೇ ನೋಟೀಸು ನೀಡಿರಲಿಲ್ಲ. ನಿಪಿ-10 ರ ಚಕ್ಕುಬಂದಿಯನ್ನು ಬದಲಾಯಿಸಿ ನಿಪಿ-8 ರಲ್ಲಿ ಪ್ರತಿವಾದಿಯ  ಅಸ್ತಿಯ ಚೆಕ್ಕುಬಂದಿಯನ್ನು ಸೇರಿಸಲಾಯಿತು ಎಂದರೆ, ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-8 ನ್ನು ವಾದಿಯೇ ಸ್ವತಃ ಬಂದು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಿಪಿ-8 ನ್ನು ಅಸದ್ ಖಾನ್ ಸೊಸೈಟಿಯ ಕಾರ್ಯದಶಿರ್ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-8 ರಲ್ಲಿ ಸೊಸೈಟಿಯ ಮೋಹರು ಇದೆ ಎಂದರೆ ಸರಿ. ನಿಪಿ-8 ನ್ನು ಬರೆದುಕೊಟ್ಟ ಕಾರ್ಯದರ್ಶಿ 2014 ರಲ್ಲಿಯೂ ಕಾರ್ಯದರ್ಶಿಯಾಗಿದ್ದರು ಎಂದು ತೋರಿಸಲು ಕಾಗದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸೊಸೈಟಿಯಲ್ಲಿ ಕಾಗದ ಪತ್ರವನ್ನು ಮಾಡಬೇಕಾದರೆ ಮೊದಲು ಠರಾವು ಪಾಸು ಮಾಡಿ ನೀಡಲಾಗುತ್ತದೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-8 ರಲ್ಲಿ ಯಾವ ದಿನಾಂಕದಲ್ಲಿ ಮಿಟಿಂಗ್ ಆಯಿತು,  ದುರಸ್ತಿ ಮಾಡಲು ಅನುಮೋದನೆ ಯಾವಾಗ ದೊರೆಯಿತು ಎಂದು ನಮೂದಾಗಿಲ್ಲ ಎಂದರೆ ಸರಿ. ಅಸ್ಲಮ್ ಮಿರ್ಜಾ ಎನ್ನುವರು ನನ್ನ

**ಅಸಲು ದಾವೆ ಸಂಖ್ಯೆ 135/2014**
**ಪಿಡಬ್ಲೂ -1**

ಮಿತ್ರರು ಎಂದರೆ ಸರಿ . ನಿಪಿ-8 ರಲ್ಲಿ ನಾನು ಸಾಕ್ಷಿದಾರನಲ್ಲ. 1990 ರಲ್ಲಿ ಅಸದ್ ಖಾನ್ ಸೊಸೈಟಿಯ ವಿರುದ್ದ ಪೋಲಿಸ ಕೇಸುಗಳು ಅಗಿದ್ದವು ಎಂದರೆ, ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ಗಂಡ ಪೋಲಿಸ ಇಲಾಖೆಯಲ್ಲಿ ಇದ್ದ ಕಾರಣ ನಿಪಿ-10 ನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸೊಸೈಟಿಗೆ ನಿಪಿ-10 ರಲ್ಲಿ ತೋರಿಸಿದ ಮೊತ್ತವನ್ನು ಪಾವತಿಸಿದ ಬಗ್ಗೆ ರಶೀದಿಯನ್ನು ಹಾಜರುಪಿಡಿಸಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ .**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**